159ಇ೬
01

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಟಿ.ಎನ್. ಜವರಾಯಿಗೌಡ, ಇವರು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಉತ್ತರ**

**ಸೂಚನೆ:-**

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೈಸ್-ತುಮಕೂರು ಇಂಟಿಗ್ರೇಷನ್ ಯೋಜನೆಗಾಗಿ ಸಾರ್ವಜನಿಕರ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲು ಹೊರಡಿಸಿರುವ ಅಂತಿಮ ಅಧಿಸೂಚನೆಗೆ ಸಾರ್ವಜನಿಕರಿಂದ ಹಾಗೂ ರೈತ ಕುಟುಂಬಗಳಿಂದ, ಬಾಧಿತ ಭೂ ಮಾಲೀಕರು, ನಿವೇಶನದಾರರು ಸರ್ಕಾರದ ವಿರುದ್ಧ ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಹಾಗೂ ಆಕ್ಷೇಪಣಾ ಪತ್ರಗಳನ್ನು ಸಲ್ಲಿಸುತ್ತಿದ್ದಾರೆ. ಈ ಬಗ್ಗೆ ದಿನಾಂಕ:23-7-2026ರ ವಿಜಯ ಕರ್ನಾಟಕ ಪತ್ರಿಕೆಯಲ್ಲೂ ವರದಿಯಾಗಿದೆ. ಖಾಸಗಿ ಸಂಸ್ಥೆಯ ಲಾಭಕ್ಕಾಗಿ ಬಡ ಮತ್ತು ಮಧ್ಯಮ ವರ್ಗದವರ ಆಸ್ತಿಗಳನ್ನು ಬಲಿ ನೀಡಲಾಗುತ್ತಿದೆ. ಈ ಉದ್ದೇಶಿತ ರಸ್ತೆಯು ಸಾರ್ವಜನಿಕರಿಗಿಂತ ಹೆಚ್ಚಾಗಿ ನೈಸ್ ಸಂಸ್ಥೆಯ ಟೋಲ್ ಆದಾಯ ಮತ್ತು ವಾಣಿಜ್ಯ ಲಾಭಕ್ಕೆ ನೆರವಾಗಲಿದೆ. ಬಿ.ಡಿ.ಎ. ಹೊಸೂರು ರಸ್ತೆಯ ನೈಸ್ ಸಂಪರ್ಕವನ್ನು ಕೈಬಿಟ್ಟಿದ್ದು, ಕೇವಲ ತುಮಕೂರು ರಸ್ತೆ ಸಂಪರ್ಕ ಮುಂದುವರಿಸಿ ತಾರತಮ್ಯ ಮಾಡುತ್ತಿದೆ. ಇದರಿಂದ ಪ್ರಭಾವಿಗಳ ಆಸ್ತಿ ಉಳಿಸಿ ಜನ ಸಾಮಾನ್ಯರ ಮನೆಗಳನ್ನು ಗುರಿ ಮಾಡಲಾಗಿರುವ ಬಗ್ಗೆ.**

**ಉತ್ತರ:-**

- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ರಸ್ತೆ (ಪಿಆರ್ಆರ್-1) ಯೋಜನೆಗೆ ಸಂಬಂಧಪಟ್ಟಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/399/ಎಂಎನ್ಎಕ್ಸ್/2006, ದಿನಾಂಕ:29.06.2007 ರಲ್ಲಿ 1810 ಎಕರೆ 18.50 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

- ತುಮಕೂರು ರಸ್ತೆ ನೈಸ್ ಇಂಟಿಗ್ರೇಷನ್ ಉದ್ದೇಶಕ್ಕಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/81/ಎಂಎನ್ಎಕ್ಸ್/2026, ದಿನಾಂಕ: 29.05.2026 ರಲ್ಲಿ 63 ಎಕರೆ 34.75ಗುಂಟೆ ಜಮೀನಿಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

- ತುಮಕೂರು ರಸ್ತೆ ನೈಸ್ ಇಂಟಿಗ್ರೇಷನ್ ಉದ್ದೇಶಕ್ಕಾಗಿ ಹೊರಡಿಸಲಾಗಿರುವ ಅಂತಿಮ ಅಧಿಸೂಚನೆಯಲ್ಲಿ ಕೆಐಎಡಿಬಿ ಗೆ ಸೇರಿದ 13 ಎಕರೆ 34.50 ಗುಂಟೆ ಮತ್ತು ನೈಸ್ ಸಂಸ್ಥೆಗೆ ಸೇರಿದ 04 ಎಕರೆ 09 ಗುಂಟೆ ಹಾಗೂ ಖಾಸಗಿ ವ್ಯಕ್ತಿಗಳಿಗೆ ಸೇರಿದ 45 ಎಕರೆ 31.25ಗುಂಟೆ ಜಮೀನು ಸೇರಿ ಒಟ್ಟು 63 ಎಕರೆ 34.75ಗುಂಟೆ ಜಮೀನು ಒಳಗೊಂಡಿದ್ದು, ಭೂಮಾಲೀಕರು ಹಾಗೂ ರೆವಿನ್ಯೂ ನಿವೇಶನದಾರರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ, ನಿಯಮಾನುಸಾರ ಭೂಸ್ವಾಧೀನ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುತ್ತಿದೆ.

- ಮುಂದುವರೆದು, ಹೊಸೂರು ರಸ್ತೆ ನೈಸ್ ಇಂಟಿಗ್ರೇಷನ್ ಉದ್ದೇಶಕ್ಕಾಗಿ ದಿನಾಂಕ:18.04.2022ರಂದು 112 ಎಕರೆ 02ಗುಂಟೆ ಜಮೀನಿಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದ್ದು, ಅಂತಿಮ ಅಧಿಸೂಚನೆ ಹೊರಡಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

• ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪಿಆರ್‌ಆರ್-1) ಯೋಜನೆಗೆ ಭೂಮಿಯನ್ನು ಸ್ವ-ಇಚ್ಛೆಯಿಂದ ನೀಡುತ್ತಿರುವ ಭೂಮಾಲೀಕರಿಗೆ ಸಂಧಾನಿತ ನಗದು ಭೂಪರಿಹಾರ ಅಥವಾ TDR ಅಥವಾ FAR ಅಥವಾ ಅಭಿವೃದ್ಧಿಪಡಿಸಿದ ವಸತಿ / ವಾಣಿಜ್ಯ ನಿವೇಶನಗಳ ಭೂ ಪರಿಹಾರದ ಆಯ್ಕೆಗಳನ್ನು ನೀಡಲಾಗುತ್ತಿದ್ದು, ಹೊಸೂರು ರಸ್ತೆ ನೈಸ್ ಇಂಟಿಗ್ರೇಷನ್ ಯೋಜನೆಯನ್ನು ಕೈಬಿಡುವ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

**ಸಂಖ್ಯೆ: ನಅಇ 265 ಎಂಎನ್‌ಕ್ಸ್ 2026**

**(ಡಿ.ಕೆ. ಶಿವಕುಮಾರ್)**
ಮುಖ್ಯಮಂತ್ರಿ